Spl. Case No.75/2018
PW. 35, CW.35

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :35 ಸಿಡಬ್ಲು :35

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ಎಸ್. ಸತ್ಯನಾರಾಯಣರಾವ |
| ತಂದೆಯ ಹೆಸರು | : | ಶ್ರೀ.ಶಂಕರರಾವ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ವ್ಯವಸ್ಥಾಪಕರು, ಪುರಸಭೆ ಸೊರಬ, ಜಿಲ್ಲೆಃ ಶಿವಮೊಗ್ಗ |
| ವಾಸ್ತವ್ಯ | : | ಶಿವಮೊಗ್ಗ |
| ದಿನಾಂಕ | : | 08-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 04-08-2017 ರಿಂದ ದಿನಾಂಕಃ 31-01-2018 ರವರೆಗೆ ನಾನು ಮುಗಳಖೋಡ ಪುರಸಭೆಯ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಮುಗಳಖೋಡ ಗ್ರಾಮದ ಸರ್ವೇ ನಂಬರ 643/ಎ/1 ಇದರ ಬಗ್ಗೆ ನನಗೆ ಮೊದಲಿಗೆ ಮಾಹಿತಿ ಇರಲಿಲ್ಲ. ದಿನಾಂಕಃ 25-08-2017 ರಂದು ಸಂಜೆ 6:00 ಗಂಟೆಗೆ ಮುಗಳಖೋಡ ಗ್ರಾಮದ ಗ್ರಾಮಸ್ಥರು ನನಗೆ ಫೋನ ಮಾಡಿ ಮುಗಳಖೋಡ ಗ್ರಾಮದ ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿರುವ ಚೌಡಮ್ಮ ದೇವರ ಪಾದುಕಟ್ಟೆಯ ಪಕ್ಕದ ಜಾಗದಲ್ಲಿ ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ್ದಾರೆ ಎಂದು ವಿಚಾರ ಹೇಳಿದರು. ನಾನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡುತ್ತೇನೆ ನೀವು ಸುಮ್ಮನಿರಿ ಎಂದು ಅವರಿಗೆ ಸಮಾಧಾನ ಮಾಡಿದ್ದೇನು.

3. ದಿನಾಂಕಃ 26-08-2017 ರಂದು ಬೆಳಗ್ಗೆ 11:00 ಗಂಟೆಗೆ ಪುರಸಭೆಯ ಅಧ್ಯಕ್ಷರಾದ ಮಹಾಂತೇಶ ಗೊಳಸಂಗಿ ಹಾಗೂ ಸಿಬ್ಬಂದಿಯವರನ್ನು ಕರೆದುಕೊಂಡು ಸ್ಥಳಕ್ಕೆ ಭೇಟಿ ನೀಡಿದ್ದೇನು. ಬಾಬನ್ನ ಎನ್ನುವವರು ಲೈಸನ್ಸ ಆಧಾರದ ಮೇಲೆ ಕಟ್ಟಡ ಕಟ್ಟುತ್ತಿದ್ದರು. ಆ ಲೈಸನ್ಸನ್ನು ಹಿಂದಿನ ಮುಖ್ಯಾಧಿಕಾರಿಗಳು ಬಾಬನ್ನ ಅವರಿಗೆ ನೀಡಿದ್ದರು. ನಾವು, ಅಧ್ಯಕ್ಷರು ಮತ್ತು ಸಿಬ್ಬಂದಿಯವರು ಸ್ಥಳದಲ್ಲಿ ನಮ್ಮ ಕಚೇರಿಯಲ್ಲಿರುವ ದಾಖಲೆಗಳನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅದರಂತೆ ಸ್ಥಳ ಪರಿಶೀಲನೆ ಮಾಡುತ್ತಿದ್ದೇವು. ಆ ಸಮಯದಲ್ಲಿ ಬಸಪ್ಪ ಯಮನಪ್ಪ ಮಾದರ ಮತ್ತು ಅವರ ಸಂಗಡಿಗರು ಗುಂಪು ಕಟ್ಟಿಕೊಂಡು ಬಂದು ಒಂದು ಸ್ಥಳದಲ್ಲಿ ನಿಂತಿದ್ದರು. ಬಾಬನ್ನ ಅವರ ಸಂಗಡಿಗರು ಇನ್ನೊಂದು ಗುಂಪು ಕಟ್ಟಿಕೊಂಡು ಇನ್ನೊಂದು ಕಡೆ ನಿಂತಿದ್ದರು.

4. ಬಸಪ್ಪನ ಕಡೆಯವರು ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು ಕೂಗಾಡುತ್ತಿದ್ದರು. ನಾನು ಮತ್ತು ನಮ್ಮ ಅಧ್ಯಕ್ಷರು ನಾವು ಪರಿಶೀಲನೆ ಮಾಡುತ್ತೇವೆ ಸುಮ್ಮನಿರಿ ಎಂದು ಸಮಾಧಾನ ಮಾಡಿದ್ದೇವು. ನಾವು ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಸ್ಥಳವು ಬಾಬನ್ನವರ ಅವರ ಅಜ್ಜನ ಹೆಸರಿನಲ್ಲಿ ಖಾತೆ ಇರುವುದು ಕಂಡುಬಂದಿತು. ಆದಾಗ್ಯೂ ಬಸಪ್ಪ ಅವರು ಸರ್ಕಾರಿ ಜಾಗ ಎಂದು ವಾದ ಮಾಡುತ್ತಿದ್ದರು.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

5. ಮುಗಳಖೋಡ ಗ್ರಾಮ ಪಂಚಾಯತಿಯ ಠರಾವು ದಿನಾಂಕಃ 25-09-2009 ರಂತೆ ಆಸ್ತಿ ಸಂಖ್ಯೆ 643/ಎ/1 ರಲ್ಲಿ ರಾವುಸಾಬ ಬಾಬನ್ನವರ ಅವರ ಹೆಸರಿನಲ್ಲಿ 110 x 92 ಅಡಿಗಳ ಅಳತೆಯ ಖಾತೆ ಇರುತ್ತದೆ. ಇದರ ಅನ್ವಯ ಅಳತೆ ಟೇಪನಿಂದ ಅಳತೆ

ಮಾಡುವ ಸಮಯದಲ್ಲಿ ಬಸಪ್ಪ ಮಾದರ ಅವರು ಅಳತೆ ಮಾಡಲು ಅಡ್ಡಿಪಡಿಸಿ ತಕರಾರು ಮಾಡಿ ನಮ್ಮ ಕಡೆಗೆ ಕಲ್ಲುಗಳನ್ನು ತೂರಿದರು. ನಾವು ಭಯಭೀತರಾಗಿ ದಾಖಲೆಗಳನ್ನು ತೆಗೆದುಕೊಂಡು ನಮ್ಮ ಸಿಬ್ಬಂದಿ ಮತ್ತು ಅಧ್ಯಕ್ಷರನ್ನು ಕಚೇರಿಗೆ ಹೊರಟು ಹೋದೆನು.

6. ದಿನಾಂಕಃ13-10-2017 ರಂದು ಡಿ.ವೈ.ಎಸ್.ಪಿ ಅವರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ. ಆಸ್ತಿಯ ಬಗ್ಗೆ ದಾಖಲೆಗಳನ್ನು ನೀಡುವಂತೆ ದಿನಾಂಕಃ 28-08-2017 ರಂದು ನಮ್ಮ ಕಚೇರಿಗೆ ಪತ್ರ ಬರೆದು ಅದರಲ್ಲಿ 15 ಅಂಶಗಳ ಬಗ್ಗೆ ಮಾಹಿತಿ ಕೇಳಿದ್ದರು. ದಿನಾಂಕಃ13-10-2017 ರಂದು ಡಿ.ವೈ.ಎಸ್.ಪಿ ರವರು ಕೇಳಿದ ದಾಖಲೆಗಳನ್ನು ಮತ್ತು ಮಾಹಿತಿಯನ್ನು ನೀಡಿದ್ದೇನೆ. ಡಿ.ವೈ.ಎಸ್.ಪಿ ರವರು ಮುಗಳಖೋಡ ಪುರಸಭೆಗೆ ದಾಖಲೆ ನೀಡುವಂತೆ ಕೋರಿ ಬರೆದ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ನಿಪಿ-52 ಎಂದು ಗುರುತಿಸಲಾಯಿತು. ಅದಕ್ಕೆ ಅನುಗುಣವಾಗಿ ನಾನು ನಮ್ಮ ಕಚೇರಿಯಲ್ಲಿ ಲಭ್ಯ ಇದ್ದ ದಾಖಲೆಗಳು ಮತ್ತು ಅದರ ಬಗ್ಗೆ ಮಾಹಿತಿಯನ್ನು ನೀಡಿದ್ದೇನೆ. ಮಾಹಿತಿಯನ್ನು ನಿಪಿ-53 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-53 [ಎ] ಎಂದು ಗುರುತಿಸಲಾಯಿತು.

7. 1950-51 ರ ಗ್ರಾಮ ಪಂಚಾಯತಿ ಮುಗಳಖೋಡ ಇದರ ಆಸ್ತಿ ಸಂಖ್ಯೆ 643 ಕ್ಕೆ ಸಂಬಂಧಿಸಿದ ಕರ ನಿರ್ಧರಣಾ ಪಟ್ಟಿಯ ಧೃಡೀಕೃತ ನಕಲನ್ನು ಹಾಜರುಮಾಡಿದ್ದೇನೆ. ಅದನ್ನು ನಿಪಿ-54 ಎಂದು ಗುರುತಿಸಲಾಯಿತು.

8. 1981-82 ರ ಗ್ರಾಮ ಪಂಚಾಯತಿ ಮುಗಳಖೋಡ ಇದರ ಆಸ್ತಿ ಸಂಖ್ಯೆ 643 ಕ್ಕೆ ಸಂಬಂಧಿಸಿದ ಕರ ನಿರ್ಧರಣಾ ಪಟ್ಟಿಯ ಧೃಡೀಕೃತ ನಕಲನ್ನು ಹಾಜರುಮಾಡಿದ್ದೇನೆ. ಅದನ್ನು ನಿಪಿ-55 ಎಂದು ಗುರುತಿಸಲಾಯಿತು.

9. 2000-01 ರ ಗ್ರಾಮ ಪಂಚಾಯತಿ ಮುಗಳಖೋಡ ಇದರ ಆಸ್ತಿ ಸಂಖ್ಯೆ 643/ಎ/2/1 ಕ್ಕೆ ಸಂಬಂಧಿಸಿದ ನಾಲ್ಕು ಕರ ನಿರ್ಧರಣಾ ಪಟ್ಟಿಗಳನ್ನು ಧೃಡೀಕೃತ ನಕಲನ್ನು

ಹಾಜರುಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ–56, ನಿಪಿ–57, ನಿಪಿ–58 ಮತ್ತು ನಿಪಿ–59 ಎಂದು ಗುರುತಿಸಲಾಯಿತು.

10. 2000–01 ರ ಗ್ರಾಮ ಪಂಚಾಯತಿ ಮುಗಳಖೋಡ ಇದರ ಆಸ್ತಿ ಸಂಖ್ಯೆ ಅ ನಂಬರ 971/1 643/ಅ/1 , ಅ ನಂಬರ 971/1 643/ಅ/1 ಅ ನಂಬರ 971/1 643/ಅ/1 ಕ್ಕೆ ಸಂಬಂಧಿಸಿದ ಕರ ನಿರ್ಧರಣಾ ಪಟ್ಟಿಯನ್ನು ಧೃಡೀಕೃತ ನಕಲನ್ನು ಹಾಜರುಮಾಡಿದ್ದೇನೆ. ಅದನ್ನು ನಿಪಿ–60 ಎಂದು ಗುರುತಿಸಲಾಯಿತು.

11. ದಿನಾಂಕಃ 23–06–2017 ರಂದು ಹಿಂದಿನ ಮುಖ್ಯಾಧಿಕಾರಿಗಳು ಕಟ್ಟಡ ಕಟ್ಟಲು ಪರವಾನಿಗೆ ರಾವುಸಾಬ ನೇಮಣ್ಣ ಬಾಬನ್ನವರ ಅವರಿಗೆ ನೀಡಿರುತ್ತಾರೆ ಎಂದು ನಾನು ಮಾಹಿತಿಯನ್ನು ನೀಡಿದ್ದೇನೆ. ಕಟ್ಟಡ ಕಟ್ಟಲು ನೀಡಿದ ಪರವಾನಿಗೆಯ ಧೃಡೀಕೃತ ಪ್ರತಿಯನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ನಿಪಿ–61 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದಿನ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.